**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::720/2014**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : ಈಶ್ವರಪ್ಪ | | **PW**-9 |
| **ತಂದೆಯ ಹೆಸರು** | : ಕಾಳಪ್ಪ | | **CW**-3 |
| **ವಯಸ್ಸು** | : 78 ವರ್ಷ | | |
| **ಉದ್ಯೋಗ** | : ವ್ಯವಸಾಯ | | |
| **ವಾಸಸ್ಥಳ** | : ಗೀಜನಕಟ್ಟೆ | | |

**ದಿನಾಂಕಃ30-01-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ಸಾಕ್ಷಿಗೆ ನಿಪಿ3 ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು. ಸದರಿ ಮಹಜರ್ ಅನ್ನು ಯಾವ ಕಾರಣಕ್ಕೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಯಾವುದೋ ಒಂದು ದಾಖಲಾತಿಗೆ ಸಹಿ ಮಾಡಲು ತಿಳಿಸಿದ್ದು ಅದರಂತೆ ನಾನು ಸಹಿ ಮಾಡಿರುತ್ತೇನೆ. ನಿಪಿ3 ಮಹಜರ್ ನಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: ಮಾನ್ಯ A P P ರವರಿಂದ ::**

ದಿನಾಂಕ 15.10.2013 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ಹಾಗೂ ಚಾಸಾ 2 ರವರನ್ನು ಪ್ರಕರಣದಕ್ಕೆ ಸಂಬಂಧಪಟ್ಟಂತೆ ಸ್ಥಳ ಮತ್ತು ಅಮಾನತ್ತು ಮಹಜರ್ ಅನ್ನು ತಯಾರಿಸುವ ಸಲುವಾಗಿ ಮಹಜರ್ ಜರುಗಿಸಲು ಸಾಕ್ಷಿದಾರರನ್ನಾಗಿ ಬರಲು ಕೇಳಿಕೊಂಡಿದ್ದು ಅದರ ಮೇರೆಗೆ ನಾವು ಒಪ್ಪಿ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹಾಗೂ ಚಾಸಾ2 ರವರ ಸಮಕ್ಷಮ ಚಾಸಾ 1

ರವರು ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಸ್ಥಳ ಮಹಜರ್ ಅನ್ನು ತಯಾರಿಸಿ ಸ್ಥಳದಲ್ಲಿ ಬಿದಿದ್ದ ಒಂದು ಸ್ಟೀಲ್ ಬೀಗ ಹಾಗೂ ನಾಗವಾಸವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಸ್ತುಗಳು ಮು ಮಾ 2 ಮತ್ತು 3 ಆಗಿರುತ್ತವೆ ಎಂದರೆ ಸರಿಯಲ್ಲ. ನಿಪಿ3 ಮಹಜರ್ ಅನ್ನು ಆ ದಿನ ಮಧ್ಯಾಹ್ನ 12.30 ಯಿಂದ 01.30 ಮಧ್ಯದಲ್ಲಿ ಗೀಜಿಕಟ್ಟೆ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ದೇವಸ್ಥಾನದ ಮುಂದೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ3 ರಲ್ಲಿ ಇರುವ ವಿಚಾರಗಳನ್ನು ನನಗೆ ಓದಿ ತಿಳಿಸಿದ ಮೇರೆಗೆ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಈಗ ಆರೋಪಿಯ ಜೊತೆ ಶಾಮಿಲಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಪಾಟೀ ಸವಾಲು :: ಆರೋಪಿತರ ವಕೀಲರಿಂದ ::**

**( ಪಾಟೀ ಸವಾಲು ಇರುವುದಿಲ್ಲ)**

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ

ಸಾಕ್ಷಿಯ ಸಹಿ::